ಮೆಹದಿಯವರು ಈ ನಿವೇಶನದ ಬಾಬ್ತು ರೂ.6,720-00ಗಳನ್ನು ಸಂಘಕ್ಕೆ ಪಾವತಿ ಮಾಡಿರುವುದು ನಿಜವಿರುತ್ತದೆ.

ಆದರೆ ಇದೇ ಸಂಘದ ದಿನಾಂಕ 30-5-1981ರಲ್ಲಿ ನಡೆದ ಕಾರ್ಯಕಾರಿ ಸಮಿತಿಯ ತೀರ್ಮಾನವದ ಸಂಖ್ಯೆ 6 ರಂತೆ ಶ್ರೀಯುತರಿಗೆ ಮಂಜೂರಾಗಿದ್ದು ನಿವೇಶನ ಸಂಖ್ಯೆ 2245ನ್ನು ಅವರು ನಿವೇಶನದ ಪೂರ್ಣ ಬೆಲೆಯನ್ನು ಪಾವತಿ ಮಾಡದ ಕಾರಣ ರದ್ದುಪಡಿಸಿ ಸದರಿ ನಿವೇಶನದಸಂಖ್ಯೆ 2245ನ್ನು ಸಂಘದ ಸದಸ್ಯರಾದ ಶ್ರೀ ಎಸ್ ಮಹಾಲಿಂಗಣ್ಣ ಇವರಿಗೆ ಮಂಜೂರು ಮಾಡಿ, ಅವರಿಗೆ ಮಂಜೂರಾಗಿರುವ ನಿವೇಶನ ಸಂಖ್ಯೆ : 2242ನ್ನು ಆಗ ಸಂಘದ ಕಾರ್ಯದರ್ಶಿಯಾಗಿದ್ದ ಶ್ರೀ ಎಸ್.ಆರ್.ರೋಣಿ ಇವರಿಗೆ ಮಂಜೂರು ಮಾಡಲಾಗಿದೆ. ಶ್ರೀ ಶೌಕತ್ ಮೆಹದಿಯವರಿಂದ ನಿವೇಶನದ ಪೂರ್ಣ ಬೆಲೆ ರೂ.10,000 ದ ಪೈಕಿ ರೂ.6,720.00ಜಮಾ ಪಡೆದಿದ್ದು ಬಾಕಿ ರೂ.3280 ಬರಬೇಕಾಗಿರುವುದರಿಂದ ಸದರಿಯವರಿಗೆ ಮಂಜೂರಾಗಿದ್ದ ನಿವೇಶನವನ್ನು ವಜಾಮಾಡಿ, ಅಂದಿನ ಕಾರ್ಯದರ್ಶಿಯವರಿಗೆ ಅನುಕೂಲ ಮಾಡಿರುವುದು ನಿಜವಾಗಿರುತ್ತದೆ.

ಆದರೆ ಶ್ರೀ ಶೌಕತ್ ಮೆಹದಿಯ ವಿಧವೆ ಇವರು ಸಹಕಾರ ಸಂಘಕ್ಕೆ ಮತ್ತು ಸಹಕಾರ ಸಂಘಗಳ ನಿಬಂಧಕರಿಗೆ ಮನವಿ ಮಾಡಿರುವುದನ್ನು ಪರಿಗಣಿಸಿ ದಿನಾಂಕ 20.3.91ರಲ್ಲಿ ನಡೆದ ಸಂಘದ ಕಾರ್ಯಕಾರಿ ಸಮಿತಿಯವರು ಬೆಂಗಳೂರು ಪ್ರಾಧಿಕಾರದಿಂದ ಈ ಸಂಘಕ್ಕೆ ಬಿಡುಗಡೆ ಯಾಗಬೇಕಾಗಿರುವ ನಿವೇಶನಗಳಿದ್ದು ಅವುಗಳು ಬಿಡುಗಡೆಯಾದ ಕೂಡಲೇ ಅವುಗಳ ಪೈಕಿ ಒಂದು ನಿವೇಶನವನ್ನು ಶ್ರೀ ಲೇಟ್ ಶೌಕತ್ ಮೆಹದಿಯವರ ವಿಧವೆ ಪತ್ನಿಗೆ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಿ ತುರ್ತುಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಇಂತಹ ಲೋಪದೊಷಕ್ಕೆ ಕಾರಣರಾದವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಈಗ ಇದು ಸಹಕಾರ ಸಂಘದ ಆಂತರಿಕ ವ್ಯವಹಾರ ಇರುವುದರಿಂದ ನಾವು ಅವರನ್ನು ಪರ್ಸ್ಯೂಮಾಡಬಹುದೇ ಹೊರತು ಹೆಚ್ಚು ಏನು ಮಾಡುವುದಕ್ಕೆ ಆಗುವುದಿಲ್ಲ. ಆದರೂ ಸಹ ಈ ವಿಧವೆಯ ಬಗ್ಗೆ ಸಹಕಾರ ಸಹಾನುಭೂತಿಯಿಂದ ಪರಿಗಣಿಸಿ ಅವರಿಗೆ ಸೈಟ್ ಕೊಡಬೇಕೆಂದು ನಾವು ಸೂಚನೆ ಕೊಡುತ್ತೇವೆ.

5) ಗ್ರಾಮೀಣ ಆರೋಗ್ಯ ಕಾರ್ಯಕರ್ತರು ಮತ್ತು ಸಿನಿಮಾ ಪ್ರೊಜೆಕ್ಟರ್ ಆಪರೇಟರ್ಸ್‌ಗಳ ನೇಮಕಾತಿ

ಶ್ರೀ ಕೆ. ಕುಶಾಲ (ಸೂಳ್ಯ) : ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಕುಟುಂಬ ಕಲ್ಯಾಣ ಇಲಾಖೆಯಲ್ಲಿ 1985ನೇ ಇಸವಿಯಿಂದ ಗ್ರಾಮೀಣ ಆರೋಗ್ಯ ಕಾರ್ಯಕರ್ತರ ಹುದ್ದೆಗೆ ಕಾರ್ಯಕರ್ತರ ತರಬೇತಿಯನ್ನು 2-3 ತಿಂಗಳಿಗೆ ನೀಡಲಾಗಿದೆ. ಸುಮಾರು 800 ಜನ ತರಬೇತಿದಾರರು ಇದ್ದು, ಸದರಿ ಯಾರಿಗೂ ಇಲಾಖೆಯಿಂದ ಹುದ್ದೆಯನ್ನು ನೀಡಲಾಗಿರುವುದಿಲ್ಲ. 1990-91ರಲ್ಲಿ ಕೂಡಾ ಸದರಿ ಆರೋಗ್ಯ ಕಾರ್ಯಕರ್ತರ ತರಬೇತಿಗೆ ಆಯ್ಕೆಮಾಡಿ ತರಬೇತಿಯನ್ನು ನೀಡಲಾಗುತ್ತಿದೆ. 1985 ರಿಂದ ಈತನಕ ಹುದ್ದೆ ನೀಡದೇ ಇರುವುದರಿಂದ ಸರಕಾರ ಮುಂದೆ ಏನು ಕ್ರಮವನ್ನು ಕೈಗೊಳ್ಳುವುದು? ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಪ್ಲಾನಿಂಗ್ ಬ್ಯೂರೋದಲ್ಲಿ 16 ಎಂ.ಎಂ.ನ ಪ್ರೋಜೆಕ್ಟರ್ ಹ್ಯಾಂಡಲ್ ಮಾಡಲು ಆಪರೇಟರ್ ಹುದ್ದೆಗಳು ರಾಜ್ಯಾದ್ಯಂತ ಹಲವು ಆರೋಗ್ಯ ಕೇಂದ್ರಗಳಲ್ಲಿ ಬಾಕಿ ಇರುತ್ತದೆ. ಸದರಿ ಹುದ್ದೆಗಳನ್ನು ಈ ಹಿಂದೆ ಸಿನಿಮಾ ಆಪರೇಟರ್ ಪಾಸಾದವರನ್ನು ನೇಮಕಾತಿ ಮಾಡುವ ಮೂಲಕ ಹಲವು ಕಡೆಗಳಲ್ಲಿ ತುಂಬಲಾಗಿದೆ. ಪ್ರಕೃತ ಸದರಿ ಆಪರೇಟರ್ ಹುದ್ದೆಗಳಿಗೆ ಡಿಪ್ಲೊಮಾ ಪಾಸಾದ ಡಿಪ್ಲೋಮಾ ಹೊಲ್ಡರ್‌ಗಳನ್ನು ನೇಮಕಾತಿ ಮಾಡುವುದು ಎಂಬ ಷರತ್ತಿನಲ್ಲಿ ಅನೇಕ ವರ್ಷಗಳು ಈ ಹುದ್ದೆಗಳ ಭರ್ತಿ ಆಗದೇ ಬಾಕಿ ಇರುವುದು ಡಿಪ್ಲೋಮಾ

ಹೋಲ್ಡರ್‌ಗಳಿಗೆ ಮೂಲ ವೇತನ ರೂ. 3000 ನೀಡಬೇಕಾಗುವುದು. ಸಿನಿಮಾ ಆಪರೇಟರ್ ಪಾಸಾದವರಿಗಾದರೆ ರೂ2000 ವೇತನ ನೀಡಿದರೆ ಸಾಕಾಗುವುದು. ವಾರ್ತಾ ಮತ್ತು ಪ್ರಚಾರ ಇಲಾಖೆ ಶಿಕ್ಷಣ ಇಲಾಖೆಗಳಲ್ಲಿ ಕೂಡಾ ಸಿನಿಮಾ ಆಪರೇಟರ್ ಪಾಸು ಮಾಡಿದ ಎಷ್ಟೋ ಜನರನ್ನು 16 ಎಂ.ಎಂ. ಪ್ರೊಜೆಕ್ಟರ್ ಹ್ಯಾಂಡಲ್ ಮಾಡಲು ನೇಮಕಾತಿ ಮಾಡಲಾಗಿದೆ. ಕುಟುಂಬ ಕಲ್ಯಾಣ ಪ್ಲಾನಿಂಗ್ ಬ್ಯೂರೋದಲ್ಲಿ ಮಾತ್ರ ಈ ಆಪರೇಟರ್‌ಗಳನ್ನು ನೇಮಕ ಮಾಡಲು ಇರುವ ತಾರತಮ್ಯವನ್ನು ಹೋಗಲಾಡಿಸಿ, ಸಿಮಿನಾ ಪ್ರೊಜೆಕ್ಟ್ ಆಪರೇಟರ್ ಪಾಸು ಮಾಡಿದವರನ್ನು ನೇಮಕಾತಿ ಮಾಡುವುದು ಹಾಗೂ ಗ್ರಾಮೀಣ ಆರೋಗ್ಯ ಕಾರ್ಯಕರ್ತರುಗಳನ್ನು ಕೂಡಲೇ ನೇಮಕ ಮಾಡಲು ಕ್ರಮ ಕೈಗೊಳ್ಳುವಂತೆ ಈ ಮೂಲಕ ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಸಭಾದ್ಯಕ್ಷೆಯರೇ ತಮ್ಮ ಅನುಮತಿ ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 615 ಕಿರಿಯ ಆರೋಗ್ಯ ಕಾರ್ಯಕರ್ತರ ಹುದ್ದೆಗಳು ಖಾಲಿ ಇದ್ದು ಅವುಗಳಲ್ಲಿ 307 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ನಿರ್ಣಯಿಸಲಾಗಿದೆ. ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಇಲಾಖಾ ನೇಮಕಾತಿ ಸಮಿತಿಯನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಈ ಇಲಾಖೆಯಲ್ಲಿ ಈಗಿನ ವ್ಯಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಪ್ರೊಜೆಕ್ಷನಿಸ್ಟ್ ಹುದ್ದೆಗೆ ಡಿಪ್ಲೊಮಾ ಪದವಿಯನ್ನು ಪಡೆದವರಿಗೆ ಮಾತ್ರ ನೇಮಿಸಬಹುದಾಗಿದೆ. ಸಿನಿಮಾ ಆಪರೇಟಿಂಗ್ ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳನ್ನು ನೇಮಕ ಮಾಡುವುದಕ್ಕೆ ಸಾಧ್ಯವಾಗುವಂತೆ ನಿಯಮಗಳನ್ನು ಮಾರ್ಪಡಿಸುವ ವಿಚಾರವನ್ನು ಪರಿಶೀಲಿಸಲಾಗುವುದು.

6) ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಪನ್ಯಾಸಕರುಗಳ ನೇಮಕಾತಿ

SMT. DAMAYANTHI BOREGOWDA : The vacancies in the Ist grade colleges in the State are about 800. The students of the smaller towns go to the City Colleges because their town colleges do not have the required number of teaching staff. The Government has closed the First Grade Colleges where the students strength is very poor. Such colleges should be closed and the staff posted to bigger colleges or lecturers should be appointed for all the Vacancies. I request the Hon'ble Minister for Education to do the needful for appointment of Lecturers.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷೆಯರೇ, ಮೇಲ್ಕಂಡ ಸೂಚನೆಗೆ ಈ ಕೆಳಗಿನ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ.

The vacancy position in various Government First Grade Colleges in the State is as follows:

(1) Professors	6 posts
(2) Readers	251
(3) Lecturers	14
	Total 271